**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1300/2021**

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 6

| | |
|---|---|
| ಸಾಕ್ಷಿದಾರರ ಹೆಸರು | ಃ ಸಾವಿತ್ರಮ್ಮ |
| ಗಂಡನ ಹೆಸರುಃ | ಃಮಹಂತೇಶ |
| ವಯಸ್ಸು | ಃ **49 ವರ್ಷ** |
| ಉದ್ಯೋಗ | ಃ ಗೃಹಿಣಿ |
| ವಾಸಸ್ಥಳ | ಃ ನವಿಲೆಹಾಳ್ ಚೆನ್ನಗಿರಿ ತಾಲ್ಲೂಕು |

**ದಿನಾಂಕ: 16-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ-1 ನನ್ನ ಮಗಳು . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ನನ್ನ ಅಳಿಯ ಹಾಗೂ ಅವರ ತಾಯಿ ಆಗಿರುತ್ತಾರೆ. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಲಕ್ಕವಳ್ಳಿಯಲ್ಲಿ ನಮ್ಮ ಅಳಿಯನ ಮನೆಯಲ್ಲಿ ಆರೋಪಿತರು ವರದಕ್ಷಿಣೆ ನೀಡುವ ವಿಚಾರವಾಗಿ ಚಾಸಾ1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ಆರೊಪಿತರು ಚಾಸಾ-1 ರವರಿಗೆ ಹೊಟ್ಟೆಗೆ ಹೊಡೆದು ಹಲ್ಲೆ ಮಾಡಿದ ಕಾರಣ ಅವಳ ಹೊಟ್ಟೆಯಲ್ಲಿದ್ದ ಮಗು ಗರ್ಭಪಾತವಾಗಿ ತೀರಿಕೊಂಡಿರುತ್ತದೆ. ನಂತರ ನಾವು ಚಾಸಾ-1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇವೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ 18-07-2020 ರಂದು ಹಬ್ಬ ಆಚರಿಸಲು ನಮ್ಮ ಮನೆಗೆ ಬಂದು ದಿಃ 03-08-2020 ರಂದು ಚಾಸಾ-1 ರವರನ್ನು ಕರೆದುಕೊಂಡು ನಾವೆಲ್ಲಾ ಅವರ ಗಂಡನ ಮನೆಗೆ ಬಿಡಲು ಹೋಗಿರುತ್ತೇವೆ ಎಂದರೆ ಸರಿ. ಚಾಸಾ-1 ರವರನ್ನು ತಡವಾಗಿ ಕರೆದುಕೊಂಡ ಹೋದ ವಿಚಾರವಾಗಿ ಆರೋಪಿತರು ಚಾಸಾ-1 ರವರಿಗೆ ನಿಮಗೆ ಹಾಗೂ ಚಾಸಾ-4 ರವರಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ತಲೆ ಕೂದಲನ್ನು ಹಿಡಿದು ಎಳೆದಾಡಿ, ಕೈ ಕಾಲಿಗೆ ಹೊಡೆದು ಮನೆಯಿಂದ ಹೊರಗಡೆ ಕರೆದುಕೊಂಡು ಬಂದಿರುತ್ತಾರೆಂದರೆ ಸರಿ. ಅಲ್ಲೇ

ಬಿದಿದ್ದ ಒಂದು ದೊಣ್ಣೆಯಿಂದ ಚಾಸಾ-1 ರವರ ಬಲಗೈನ ತೋರುಬೆರಳಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆಂದರೆ ಸರಿ. ಚಾಸಾ-1 ರವರಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿ. ಜಗಳ ಬಿಡಿಸಲು ಹೋದ ನನಗೂ ಹಾಗೂ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.**

ನನ್ನ ಗಂಡ ತೀರಿಹೋದ ನಂತರ ನಮ್ಮ ಕುಟುಂಬವನ್ನು ನನ್ನ ಅಳಿಯ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗಳು ಪ್ರಸ್ತುತ ನನ್ನ ಅಳಿಯನ ಜೊತೆ ವಾಸವಾಗಿರುತ್ತಾರೆಂದರೆ ಸರಿ. ಅವರಿಗೆ ಎರಡು ಮಕ್ಕಳು ಆಗಿರುತ್ತಾರೆಂದರೆ ಸರಿ. ಯಾವುದೇ ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ, ನಮ್ಮ ಪರಿಚಯಸ್ಥರು ದೂರನ್ನು ಓದಿ ತಿಳಿಸಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ. ಯಾವುದೇ ಘಟನೆ ಆಗದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**